


ಬಿಜಾಪುರ ಬುಲ್ಸ್‌ನ ಎಂ.ಜಿ.ನವೀನ್ ಬೌಲಿಂಗ್ ಶೈಲಿ

ರಾಜ್ಯದ ಪರ ಸಯ್ಯದ್ ಮುಸ್ತಾಕ್ ಅಲಿ ಟ್ರೋಫಿ ಆಡಿದ ಆಟಗಾರ. ಆದರೆ ಕ್ರಿಕೆಟ್ ಪ್ರಿಯರ ಮನ–ಮನೆಯಲ್ಲಿ ಅವರು ಸ್ಥಾನ ಗಳಿಸಲು ಕಾರಣ ಕೆಪಿಎಲ್‌ನಲ್ಲಿ ಪ್ರದರ್ಶಿಸಿದ ಅಮೋಘ ಇನಿಂಗ್ಸ್‌ಗಳು.

ಚಾಂಪಿಯನ್ ತಂಡ ಬಳ್ಳಾರಿ ಟಸ್ಕರ್ಸ್ ಅನ್ನು ಫೈನಲ್ ವರೆಗೆ ತಲುಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ರೋಹನ್ ಕದಮ್ ಕೂಡ ಇದೇ ಸಾಲಿಗೆ ಸೇರುತ್ತಾರೆ. ಗರಿಷ್ಠ ರನ್ ಗಳಿಸಿದವರ ಪಟ್ಟಿಯಲ್ಲಿ ಅವರದು ಐದನೇ ಸ್ಥಾನ. ನಾಲ್ಕು ಅರ್ಧಶತಕಗಳೊಂದಿಗೆ ಒಟ್ಟು 304 ರನ್ ಗಳಿಸಿದ ಕದಮ್ ಅಪ್ಪಟ ಕೆಪಿಎಲ್ ಪ್ರತಿಭೆ. ರಾಜ್ಯದ ಪರವಾಗಿ ಎರಡು ರಣಜಿ ಪಂದ್ಯಗಳನ್ನು ಆಡಿರುವ ರಾಜು ಭಟ್ಕಳ 2010ರಿಂದ ಕೆಪಿಎಲ್‌ನಲ್ಲಿ ನಿರಂತರ ಹೆಸರು ಮಾಡುತ್ತಿದ್ದಾರೆ. ಈ ಬಾರಿ 323 ರನ್ ಗಳಿಸಿದ ಅವರು ಮೈಸೂರು ವಾರಿಯರ್ಸ್ ತಂಡವನ್ನು ಸೆಮಿಫೈನಲ್ ವರೆಗೆ ಅಜೇಯವಾಗಿರಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಒಟ್ಟು 149 ರನ್ ಗಳಿಸಿದ ಮಿರ್ ಕೌನೇನ್ ಅಬ್ಬಾಸ್ ಇದೀಗ ರಾಜ್ಯ ರಣಜಿ ತಂಡದಲ್ಲಿ ಸ್ಥಾನ ಗಳಿಸಿದ್ದಾರೆ.

ಈ ಬಾರಿಯ ಕೆಪಿಎಲ್‌ನಲ್ಲಿ ಬೌಲರ್‌ಗಳು ಮಿಂಚಿದ್ದು ಕಡಿಮೆ. ಧಾರಾಳ ರನ್‌ಗಳು ಹರಿದು ಬಂದ ಟೂರ್ನಿಯಲ್ಲಿ 13 ವಿಕೆಟ್ ಗಳಿಸಿದ ವೈಶಾಖ್ ವಿಜಯ ಕುಮಾರ್,11 ವಿಕೆಟ್ ಕೆಡವಿದ ಸ್ಟಾಲಿನ್, ತಲಾ 10 ವಿಕೆಟ್ ಉರುಳಿಸಿದ ಪ್ರವೀಣ್ ದುಬೆ, ಅಭಿಷೇಕ್ ಸಕೂಜ ಮುಂತಾದವರ ಬೌಲಿಂಗ್ ಸಾಮರ್ಥ್ಯ ಹೊರಜಗತ್ತಿಗೆ ಕಂಡದ್ದು ಕೆಪಿಎಲ್ ಮೂಲಕ.

ರಾಷ್ಟ್ರೀಯ, ರಾಜ್ಯ ತಂಡಗಳಲ್ಲಿ ಆಡುತ್ತಿರುವ ಪ್ರಸಿದ್ಧ ಆಟಗಾರರ ಹೊರತಾಗಿ ಕೆಪಿಎಲ್‌ನಲ್ಲಿ ಗಮನ ಸೆಳೆದವರ ಪೈಕಿ ಅನೇಕರು ಈಗಾಗಲೇ ವಯೋಮಾನ ವಿಭಾಗದ ಕ್ರಿಕೆಟ್‌ನಲ್ಲಿ ಹೆಸರು ಮಾಡಿದ್ದಾರೆ. ಒಂದೆರಡು ರಣಜಿ ಪಂದ್ಯಗಳನ್ನು ಆಡಿದವರೂ ಇದ್ದಾರೆ. ಬೇರೆ ರಾಜ್ಯ ಅಥವಾ ಸೇನಾ ತಂಡದ ಪರವಾಗಿ ಆಡಿದ ಅಕ್ಷಯ ಕೋಡೋತ್, ಸರ್ಫರಾಜ್ ಅಶ್ರಫ್, ಚಿರಂಜೀವಿ ಮುಂತಾದ ಆಟಗಾರರು ನಮ್ಮವರ ಮನ ಗೆದ್ದದ್ದು ಕೆಪಿಎಲ್ ಟೂರ್ನಿ ಮೂಲಕ.

ಮಹಮ್ಮದ್ ತಾಹ, ಕ್ರಾಂತಿಕುಮಾರ್, ಡೇವಿಡ್ ಮಥಾಯಸ್, ಎಂ.ಜಿ.ನವೀನ್, ಪ್ರವೀಣ್ ದುಬೆ ಮುಂತಾದವರು ಸಯ್ಯದ್ ಮುಸ್ತಾಕ್ ಅಲಿ ಟ್ರೋಫಿಯಲ್ಲಿ ರಾಜ್ಯದ ಪರ ಟ್ವೆಂಟಿ–ಟ್ವೆಂಟಿ ಪಂದ್ಯಗಳನ್ನು ಆಡಿದ್ದಾರೆ. ಅಲ್ಲಿ ಗಮನಾರ್ಹ ಸಾಧನೆ ಮಾಡಲಾಗಲಿಲ್ಲ. ಆದರೆ ಕೆಪಿಎಲ್‌ನಲ್ಲಿ ಮಿಂಚಿನ ಆಟ ಪ್ರದರ್ಶಿಸಿದ್ದಾರೆ. ಮುಸ್ತಾಕ್ ಅಲಿ ಟ್ರೋಫಿಯ ನಾಲ್ಕು ಪಂದ್ಯಗಳಲ್ಲಿ ಒಟ್ಟು 86 ರನ್ ಗಳಸಿದ ಮಹಮ್ಮದ್ ತಾಹ ಕೆಪಿಎಲ್‌ನಲ್ಲಿ 358 ರನ್ ಗಳಿಸಿ ಮಿಂಚಿದ್ದಾರೆ. ದಿಕ್ಷಾಂಶು ನೇಗಿ ಕೂಡ ಕೆಪಿಎಲ್‌ನಲ್ಲಿ ವಿಶೇಷ ಸಾಮರ್ಥ್ಯ ಪ್ರದರ್ಶಿಸಿ 256 ರನ್‌ಗಳೊಂದಿಗೆ ಆರನೇ ಸ್ಥಾನ ಗಳಿಸಿದ್ದಾರೆ. ಬಳ್ಳಾರಿ ಟಸ್ಕರ್ಸ್ ಪರವಾಗಿ ಎದುರಾಳಿಗಳ ಬ್ಯಾಟಿಂಗ್ ಪಡೆಯನ್ನು ಕಟ್ಟಿ ಹಾಕಿ ತಂಡ ಪ್ರಶಸ್ತಿ ಗೆಲ್ಲುವಲ್ಲಿ ಮುಖ್ಯ ಪಾತ್ರ ವಹಿಸಿದ ಪ್ರಸಿದ್ಧ ಕೃಷ್ಣ ಬಾಂಗ್ಲಾದೇಶ 'ಎ' ವಿರುದ್ಧ ಕರ್ನಾಟಕ ಆಡಿದ ಪಂದ್ಯದಲ್ಲಿ ಒಟ್ಟು ಆರು ವಿಕೆಟ್ ಕಬಳಿಸಿ ಮಿಂಚಿದ್ದರು. ಆದರೆ ಅವರ 'ತೋಳ್ಬಲ' ಪ್ರಕಟಗೊಂಡದ್ದು ಕೆಪಿಎಲ್‌ನಲ್ಲಿ. ಕಳೆದ ಬಾರಿಯೂ ಉತ್ತಮ ಪ್ರದರ್ಶನ ನೀಡಿದ ಅವರು ಈ ಸಲ ಎಂಟು ವಿಕೆಟ್ ಕಬಳಿಸಿ ಮಿಂಚಿದ್ದಾರೆ.

ಟೂರ್ನಿಯಲ್ಲಿ ಆಡಿದ ಆಟಗಾರರ ಪೈಕಿ ಎಂಟು ಮಂದಿಗೆ ಮಾತ್ರ 'ಆಲ್‌ರೌಂಡರ್' ಪಟ್ಟ ಇದೆ. ಆದರೆ ಹತ್ತಕ್ಕೂ ಹೆಚ್ಚು ಆಟಗಾರರು ಸಾಮರ್ಥ್ಯ ಪ್ರದರ್ಶನದ ಮೂಲಕ ಆಲ್‌ರೌಂಡ್ ಆಟವಾಡಿ ಗಮನ ಸೆಳೆದಿದ್ದಾರೆ.

ಚಾಂಪಿಯನ್ ಬಳ್ಳಾರಿ ಟಸ್ಕರ್ಸ್ ತಂಡವನ್ನು ಮುನ್ನಡೆಸಿದ ಅಮಿತ್ ವರ್ಮಾ ಮೂಲತಃ ಬ್ಯಾಟ್ಸ್‌ಮನ್. ಈ ಬಾರಿಯ ಟೂರ್ನಿಯಲ್ಲಿ 9 ಪಂದ್ಯವಾಡಿ 151 ರನ್ ಗಳಿಸಿದ ಅವರು ಹೆಚ್ಚು ಮಿಂಚಿದ್ದು ಬೌಲಿಂಗ್‌ನಲ್ಲಿ. 9 ಪಂದ್ಯಗಳಲ್ಲಿ ಈ ಲೆಗ್ ಸ್ಪಿನ್ನರ್ ಒಟ್ಟು 12 ವಿಕೆಟ್ ಕಬಳಿಸಿ ಹೆಚ್ಚು ವಿಕೆಟ್ ಕಬಳಿಸಿದವರ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದ್ದಾರೆ. 11 ವಿಕೆಟ್ ಗಳಿಸಿದ ಆಫ್ ಸ್ಪಿನ್ನರ್ ಕೆ.ಗೌತಮ್ 8 ಪಂದ್ಯಗಳಿಂದ 113 ರನ್ ಕೂಡ ಗಳಿಸಿದ್ದಾರೆ.

ಶಿಶಿರ್ ಭವಾನೆ, ಜೆ.ಸುಚಿತ್, ಶಿವಿಲ್ ಕೌಶಿಕ್, ಕಿಶೋರ ಕಾಮತ್ ಮುಂತಾದವರನ್ನು ಐಪಿಎಲ್‌ಗೆ ಕೊಡುಗೆಯಾಗಿ ನೀಡಿದ ಕೆಪಿಎಲ್ ಕರ್ನಾಟಕದ ಇನ್ನಷ್ಟು ಪ್ರತಿಭೆಗಳಿಗೆ ರಾಷ್ಟ್ರ– ಅಂತರರಾಷ್ಟ್ರ ಮಟ್ಟಕ್ಕೆ ಏರಲು ಏಣಿಯಾಗಲಿದೆ ಎಂಬುದು ಕ್ರಿಕೆಟ್ ವಲಯದ ಆಶಯ.

ಟ್ವೆಂಟಿ ಟ್ವೆಂಟಿ ಎಂದರೆ ಹೊಡಿ–ಬಡಿ ಆಟ. ಕೆಪಿಎಲ್‌ನಲ್ಲೂ ನಡೆಯುವುದು ಅದೇ. ಬ್ಯಾಟಿಂಗ್ ಆಲ್‌ರೌಂಡರ್‌ಗಳು ಟ್ವೆಂಟಿ – ಟ್ವೆಂಟಿ ಕ್ರಿಕೆಟ್‌ನಲ್ಲಿ ಹೆಚ್ಚು ಮಿಂಚುತ್ತಾರೆ. ಹೀಗಿದ್ದೂ ಕೆಪಿಎಲ್‌ನಲ್ಲಿ ಬೌಲರ್‌ಗಳು ಕೂಡ ಗಮನಾರ್ಹ ಸಾಧನೆ ತೋರಿದ್ದಾರೆ. ಇಪ್ಪತ್ತು ವರ್ಷದ ಆಸುಪಾಸಿನಲ್ಲಿರುವ ಕೆಲವು ಆಟಗಾರರು ಆರಂಭದಿಂದಲೇ ಎಲ್ಲ ಪಂದ್ಯಗಳಲ್ಲಿ ಮಿಂಚಿದ್ದಾರೆ. ಅವರಿಗೆ ಇನ್ನೂ ಭವಿಷ್ಯವಿದೆ. ಬ್ಯಾಟ್ಸ್‌ಮನ್‌ಗಳ ಆಟವಾದರೂ ಬೌಲರ್‌ಗಳಿಗೆ ಇಲ್ಲಿ ಕಲಿಯಲು ಸಾಕಷ್ಟು ಅವಕಾಶವಿದೆ. ಒಬ್ಬ ಬೌಲರ್ ಇಲ್ಲಿ ಗರಿಷ್ಠ 24 ಎಸೆತ ಹಾಕಬಹುದು. ಚೆನ್ನಾಗಿ ಹೊಡೆತ ತಿಂದರೂ ಕಡಿಮೆ ಅವಧಿಯಲ್ಲಿ ಸುಧಾರಿಸಿಕೊಂಡು ಮೇಲುಗೈ ಸಾಧಿಸುವ ಸವಾಲು ಆತನ ಮುಂದೆ ಇರುತ್ತದೆ. ಇದನ್ನು ನಿಭಾಯಿಸಿದರೆ ಬೌಲರ್ ಕೂಡ ಉತ್ತಮ ಸಾಧನೆ ಮಾಡಬಹುದು.

–ದೊಡ್ಡ ಗಣೇಶ, ಮಾಜಿ ವೇಗದ ಬೌಲರ್

